**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 220/2023**

**ಚಾ.ಸಾ - 13**
**ಪ್ರಾ.ಸಾ - 5**

**ಸಾಕ್ಷಿಗೆ ದಿನಾಂಕ 19-02-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಲಕ್ಷ್ಮೀದೇವಿ |
| ಗಂಡನ ಹೆಸರು | ಃ | ನಾಗೇಂದ್ರಪ್ಪ |
| ವಯಸ್ಸು | ಃ | 45 ವರ್ಷ |
| ಉದ್ಯೋಗ | ಃ | ಮನೆಕೆಲಸ |
| ವಾಸಸ್ಥಳ | ಃ | ಹಾಗರಗುಂಡಗಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನಾನು ಬಿ.ಸಿ.ಎಂ. ಹಾಸ್ಟೆಲಿನಲ್ಲಿ ಅಡುಗೆ ಸಹಾಯಕಳಾಗಿ ಕೆಲಸ ಮಾಡುತ್ತಿದ್ದೆ. ಚಾಸಾ-12 ನನ್ನ ಮಗ. ಚಾಸಾ-1, 11ನನ್ನ ಸಂಬಂಧಿಕರು. ಚಾಸಾ-14 ನನ್ನ ಮಗಳು, ಚಾಸಾ-15 ನನ್ನ ನಾದಿನಿಯ ಮಗನಾಗಬೇಕು. ಚಾಸಾ-16 ನನ್ನ ನೆಗೆಣ್ಣಿಯ ಮಗನಾಗಬೇಕು. ಚಾಸಾ-18 ನನಗೆ ಗೊತ್ತು. ಚಾಸಾ-17 ಗೊತ್ತಿಲ್ಲ.

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ.

ದಿನಾಂಕ 24-12-2022 ರಂದು ಟೂರಿಗೆ ಟಿಟಿ ವಾಹನದಲ್ಲಿ ಹೋಗಿ ಬರುತ್ತಿದ್ದಾಗ ಗೌನಳ್ಳಿ ಕ್ರಾಸ್ ಹತ್ತಿರ ಎದುರಿನಿಂದ ಒಂದು ಲಾರಿ ಬಂದು ಡಿಕ್ಕಿಪಡಿಸಿರುತ್ತದೆ. ನಾವು ಹೋಗುತ್ತಿದ್ದಂತಹ ವಾಹನ ಸರಿಯಾಗಿಯೇ ಇತ್ತು. ಸದರಿ ಘಟನೆಯಲ್ಲಿ ಇಬ್ಬರು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ. ಸದರಿ ಅಪಘಾತದಲ್ಲಿ ಅಪ್ಪಾರಾಯ ಮತ್ತು ನನ್ನ ನಾದಿಯ ಮಗ ಸಂಜುಕುಮಾರ ಮೃತಪಟ್ಟಿರುತ್ತಾರೆ. ಸದರಿ ಅಪಘಾತದಲ್ಲಿ ಚಾಸಾ-10ರವರಿಗೆ ಮೂಗಿಗೆ ಮತ್ತು ಬಾಯಿಗೆ ಪೆಟ್ಟಾಗಿತ್ತು. ಚಾಸಾ-12ರವರಿಗೆ ಬಾಯಿಗೆ ಮತ್ತು ಮೂಗಿಗೆ ಪೆಟ್ಟಾಗಿತ್ತು. ಚಾಸಾ-14ರವರಿಗೆ ತುಟಿ ಹೊಡೆದು ಸೀಳಿತ್ತು. 2 ವರ್ಷದ ಮಗು ಕೃಷಿಕಾಳಿಗೆ ಕಾಲಿಗೆ ಗಾಯವಾಗಿರುತ್ತದೆ. ಚಾಸಾ-11ರವರಿಗೆ ಟೊಂಕಕ್ಕೆ ಪೆಟ್ಟಾಗಿ ಕೈ ಮುರಿದಿತ್ತು. ಇನ್ನಿತರರಿಗೆ ಸಣ್ಣಪುಟ್ಟ ಗಾಯಗಳಾಗಿದ್ದವು. ಸದರಿ ಅಪಘಾತದಲ್ಲಿ ನನ್ನ ಎಡಗಾಲು ಮುರಿದಿತ್ತು. ಚಾಸಾ-1ರವರು ಪೊಲೀಸರಿಗೆ ಮತ್ತು ನಮ್ಮ ಸಂಬಂಧಿಕರಿಗೆ ಫೋನ್ ಮಾಡಿ ಕರೆಸಿದರು. ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಅಂಬ್ಯುಲೆನ್ಸಿನಲ್ಲಿ ನಮ್ಮೆಲ್ಲರನ್ನು ಕರೆದುಕೊಂಡು ಹೋದರು. ಹೆಚ್ಚಿನ ಉಪಚಾರಕ್ಕೆ ಕಲ್ಬುರ್ಗಿಯ

ಕಾಮರೆಡ್ಡಿಯ ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ಅಪಘಾತವು ಲಾರಿಯ ಚಾಲಕನ ತಪ್ಪಿನಿಂದ ಆಗಿರುತ್ತದೆ. ಅಪಘಾತದ ವಿಚಾರವಾಗಿ ಚಾಸಾ-1ರವರು ದೂರು ನೀಡಿರುತ್ತಾರೆ. ಅಪಘಾತದ ವಿಚಾರವಾಗಿ ಪೊಲೀಸರು ಕಲ್ಬುರ್ಗಿಯ ಕಾಮರೆಡ್ಡಿ ಆಸ್ಪತ್ರೆಗೆ ಬಂದು ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ.

ಸಾಕ್ಷಿಗೆ ಲಾರಿ ಮತ್ತು ಟಿಟಿ ವಾಹನ ಇರುವ ನಿಪಿ-2 ರಿಂದ 19 ಫೋಟೊಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಟಿಟಿ ವಾಹನವನ್ನು ಗುರುತಿಸಿರುತ್ತಾರೆ. ಲಾರಿಯನ್ನು ನೋಡಿ ಗುರುತಿಸಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ದಿನಾಂಕ 25-12-2022 ರಂದು ನೀವು ಅಪಘಾತ ಕುರಿತು ಹೇಳಿಕೆ ನೀಡಿದ್ದೀರಿ ಎಂದರೆ ಸರಿ. ದಿನಾಂಕ 16-12-2022 ರಂದು ಟೂರಿಗೆ ಹೋಗಿದ್ದೀರಿ ಎಂದರೆ ಸರಿ. ಟಿಟಿ ವಾಹನದ ನಂಬರ್ ಕೆಎ-68-1323 ಇರುತ್ತದೆ ಎಂದರೆ ಇದ್ದಿರಬಹುದು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಲಾರಿ ನಂ.ಕೆಎ-22 ಸಿ-3233 ಇತ್ತು ಎಂದರೆ ಅದೇ ಇದ್ದಿರಬಹುದು ಎಂದು ಉತ್ತರಿಸುತ್ತಾರೆ. ನೀವು ಪ್ರಯಾಣಿಸುತ್ತಿದ್ದಂತಹ ವಾಹನದ ಚಾಲಕನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ ಮುಂದೆ ಇರುವಂತ ಲಾರಿಯ ಚಾಲಕನು ಅತಿವೇಗವಾಗಿ ಚಲಾಯಿಸಿಕೊಂಡು ಹೋಗಿ ಯಾವುದೇ ಸಂಚಾರ ನಿಯಮಗಳನ್ನು ಪಾಲನೆ ಮಾಡದೇ ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ.

ನ್ಯಾಯಾಲಯದ ಮುಂದಿರುವ ಆರೋಪಿಯ ತಪ್ಪಿ ನಿಂದಲೇ ಅಪಘಾತ ಆಗಿದೆ ಎಂದರೆ ಲಾರಿ ಚಾಲಕನನ್ನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಲಾರಿ ಚಾಲಕನನ್ನು ನೋಡಿ ಇವನೇ ಎಂದು ಗೊತ್ತಿದ್ದರೂ ಸಹ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎನ್.ಕೆ. ವಕೀಲರಿಂದ**

ಆ ದಿನ ಯಾವ ಊರಿನಿಂದ ಹೊರಟಿದ್ದೀರಿ ಎಂದರೆ ನೆನಪಿಲ್ಲ. ನಿಮ್ಮ ವಾಹನ ಬಿಡುವಾಗ ಸಮಯ ಎಷ್ಟು ಆಗಿತ್ತು ಎಂದರೆ ಗೊತ್ತಿಲ್ಲ. ಅಪಘಾತವಾದಾಗ ಮಧ್ಯರಾತ್ರಿ ಆಗಿದ್ದರಿಂದ ಮಲಗಿದ್ದೆ. ಆ ಸಮಯದಲ್ಲಿ ನೀವು ಮಲಗಿದ್ದರಿಂದ ಅಪಘಾತವು ಯಾರ ತಪ್ಪಿನಿಂದ ಆಗಿದೆ ಎಂದು ಗೊತ್ತಿಲ್ಲ ಎಂದರೆ ಟಿಟಿ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದು ಉತ್ತರಿಸುತ್ತಾರೆ. ಚಾಸಾ-1 ನನ್ನ ಸಂಬಂಧಿಕರು ಆಗಬೇಕು. ಚಾಸಾ-1 ನಿಮ್ಮ ಸಂಬಂಧಿಕರಾದ ಕಾರಣ ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ

ಎಂದರೆ ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ನುಡಿಯುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆಃ 220/2023**

**ಚಾ.ಸಾ - 12**
**ಪ್ರಾ.ಸಾ - 6**

**ಸಾಕ್ಷಿಗೆ ದಿನಾಂಕ 19-02-2026ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ರಾಜಕುಮಾರ |
| ತಂದೆಯ ಹೆಸರು | ಃ | ನಾಗೇಂದ್ರಪ್ಪ |
| ವಯಸ್ಸು | ಃ | 28 ವರ್ಷ |
| ಉದ್ಯೋಗ | ಃ | ಏನೂ ಇಲ್ಲ |
| ವಾಸಸ್ಥಳ | ಃ | ಹಾಗರಗುಂಡಗಿ |

**ಮುಖ್ಯವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತಿಲ್ಲ. ಚಾಸಾ-1 ನನ್ನ ಮಾವನ ಮಗನಾಗಬೇಕು. ಚಾಸಾ-10 ನನ್ನ ಅಕ್ಕಳಾಗಬೆಕು. ಚಾಸಾ-11 ನನ್ನ ಸೋದಂರತ್ತೆ, ಚಾಸಾ-13 ನನ್ನ ತಾಯಿ, ಚಾಸಾ-14 ನನ್ನ ತಂಗಿ, ಚಾಸಾ-15 ನನ್ನ ಮಾವ, ಚಾಸಾ-16 ನನ್ನ ದೊಡ್ಡಪ್ಪನ ಮಗಳು, ಚಾಸಾ-17 ಗೊತ್ತಿಲ್ಲ ಚಾಸಾ-18 ನನ್ನ ಮಾವನಾಗಬೇಕು.

ಮೃತ ಸಂಜುಕುಮಾರು ಮಾವನಾಗಬೇಕು. ಮೃತ ಅಪ್ಪಾರಾವ ನಾವು ಹೋಗುತ್ತಿದ್ದಂತಹ ವಾಹನದ ಚಾಲಕನಿರುತ್ತಾನೆ.

ದಿನಾಂಕ 16-12-2022 ರಂದು ನಮ್ಮ ಊರಿನಿಂದ ಪ್ರವಾಸಕ್ಕೆ ಹೋಗಿ ವಾಪಾಸ್ ದಿನಾಂಕ 24-12-2022 ರಂದು ಬೆಳಿಗೆ 4-00 ಗಂಟೆ ಸುಮಾರಿಗೆ ಜೇವರ್ಗಿ ಬೈಪಾಸ್ ರೋಡಿನ ಗೌನಳ್ಳಿ ಕ್ರಾಸ್ ಹತ್ತಿರ ಲಾರಿ ಚಾಲಕನು ಲಾರಿಗೆ ಯಾವುದೇ ಇಂಡಿಕೇಟರ್ ಇಡಲಾರದೇ ನಮ್ಮ ವಾಹನಕ್ಕೆ ಸೈಡ್ ಕೊಟ್ಟಂತೆ ಮಾಡಿ ಒಮ್ಮೆಲೇ ಬ್ರೇಕ್ ಹಾಕಿದ್ದರಿಂದ ನಮ್ಮ ವಾಹನದ ಚಾಲಕನು ಕಂಟ್ರೋಲ್ ಇಲ್ಲದೇ ಸದರಿ ಲಾರಿಗೆ ಹಿಂದಿನಿಂದ ಡಿಕ್ಕಿಪಡಿಸಿದನು. ಸದರಿ ಅಪಘಾತದಲ್ಲಿ ಟಿಟಿ ವಾಹನದ ಚಾಲಕ ಸ್ಥಳದಲ್ಲೇ ಮೃತಪಟ್ಟನು. ಸಂಜುಕುಮಾರನು ಸಹ ಸ್ಥಳದಲ್ಲೇ ಮೃತಪಟ್ಟನು. ಸದರಿ ಅಪಘಾತದಲ್ಲಿ ಮೂಗು ಹಣೆ ಮತ್ತು ಬಾಯಿಗೆ ಭಾರೀ ರಕ್ತಗಾಯಗಳಾಗಿದ್ದವು. ನನ್ನ ತಾಯಿಗೆ ಕಾಲು ಮುರಿದಿತ್ತು. ಚಾಸಾ-14ರವರಿಗೆ ಹಲ್ಲು ಮುರಿದಿದ್ದವು, ನನ್ನ ಅಕ್ಕನ ಮಗಳಾದ ಕೃಷಿಕಾಳಿಗೆ ಕಾಲು ಮುರಿದಿತ್ತು , ಚಾಸಾ-10ರವರಿಗೆ ಮೂಗು ನರ ಮುರಿದಿತ್ತು, ಚಾಸಾ-11ರವರಿಗೆ ಕೈ ಮುರಿದು ಕುತ್ತಿಗೆ ನರ ಕಟ್ ಆಗಿತ್ತು. ಇನ್ನು ಉಳಿದವರಿಗೆ ಸಣ್ಣಪುಟ್ಟ

ಗಾಯಗಳಾಗಿದ್ದವು. ಚಾಸಾ-11 ರವರಿಗೆ ತಲೆಯ ಮೇಲೆ ತೀವ್ರಸ್ವರೂಪದ ಗಾಯವಾಗಿತ್ತು. ನಮ್ಮೆಲ್ಲರನ್ನು ಅಂಬ್ಯಲೆನ್ಸಿನಲ್ಲಿ ಜೇವರ್ಗಿಯ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಪ್ರಥಮ ಚಿಕಿತ್ಸೆ ಪಡೆದುಕೊಂಡು ಅಲ್ಲಿಂದ ಕಲ್ಬುರ್ಗಿಯ ಬಸವೇಶ್ವರ ಆಸ್ಪತ್ರೆಗೆ ಹೋಗಿ ಅಲ್ಲಿಂದ ಕಾಮರೆಡ್ಡಿ ಆಸ್ಪತ್ರೆಗೆ ಹೋಗಿ ಅಡ್ಮಿಟ್ ಆಗಿರುತ್ತೇವೆ. ಅಪಘಾತವು ಲಾರಿ ಚಾಲಕನ ತಪ್ಪಿನಿಂದಾಗಿರುತ್ತದೆ. ಲಾರಿ ನಂಬರ್ ಮತ್ತು ಟಿಟಿ ವಾಹನದ ನಂಬರ್ ಗೊತ್ತಿಲ್ಲ. ಚಾಸಾ-1ರವರು ದೂರನ್ನು ನೀಡಿರುತ್ತಾರೆ. ಪೊಲೀಸರು ಕಾಮರೆಡ್ಡಿ ಆಸ್ಪತ್ರೆಗೆ ಬಂದು ದಿನಾಂಕ 25-12-2022 ರಂದು ನನ್ನ ಹೇಳಿಕೆ ಪಡೆದಿರುತ್ತಾರೆ. ಲಾರಿ ಚಾಲಕನನ್ನು ನಾನು ನೋಡಿಲ್ಲ.

ಸಾಕ್ಷಿಗೆ ಲಾರಿ ಮತ್ತು ಟಿಟಿ ವಾಹನ ಇರುವ ನಿಪಿ-2 ರಿಂದ 19 ಫೋಟೊಗಳನ್ನು ತೋರಿಸಲಾಗಿ ಅವುಗಳನ್ನು ನೋಡಿ ಟಿಟಿ ವಾಹನವನ್ನು ಗುರುತಿಸಿರುತ್ತಾರೆ. ಲಾರಿಯನ್ನು ನೋಡಿ ಗುರುತಿಸಿರುವುದಿಲ್ಲ.

(ಮಾನ್ಯ ಸ.ಸ.ಅ ರವರು ಸಾಕ್ಷಿ ಭಾಗಶಃ ಪ್ರತಿಕೂಲವಾಗಿ ಸಾಕ್ಷಿ ನುಡಿದಿದ್ದಾರೆ ಹಾಗಾಗಿ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಘೋಷಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು, ಮುಖ್ಯ ವಿಚಾರಣೆಯಲ್ಲಿ ಸಾಕ್ಷಿ ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರೀಕ್ತವಾಗಿ ಸಾಕ್ಷ್ಯ ನುಡಿದಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಕಾರಣ ಮಾನ್ಯ ಅಭಿಯೋಜನೆಯವರಿಗೆ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**<u>ಪಾಟೀ ಸವಾಲುಃ ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರವರಿಂದ</u>**

ಟಿಟಿ ವಾಹನದ ನಂಬರ್ ಕೆಎ-68-1323 ಇರುತ್ತದೆ ಎಂದರೆ ಇದ್ದಿರಬಹುದು ಹೌದ ಎಂದು ಉತ್ತರಿಸುತ್ತಾರೆ. ಲಾರಿ ನಂ.ಕೆಎ-22 ಸಿ-3233 ಇತ್ತು ಎಂದರೆ ಅದೇ ಹೌದು ಎಂದು ಉತ್ತರಿಸುತ್ತಾರೆ. ಲಾರಿಯ ಚಾಲಕನು ಅತಿವೇಗವಾಗಿ ಚಲಾಯಿಸಿದ್ದರಿಂದ ಅಪಘಾತ ಆಗಿರುತ್ತದೆ ಎಂದರೆ ಸರಿ. ಟಿಟಿ ವಾಹನದ ಚಾಲಕನು ಸಹ ಅತಿವೇಗವಾಗಿ ಅಲಕ್ಷತನದಿಂದ ಚಾಲನೆ ಮಾಡುತ್ತಿದ್ದನು ಎಂದರೆ ಸರಿ.

ಈಗ ನ್ಯಾಯಲಾಯದ ಮುಂದಿರುವ ಆರೋಪಿತನೇ ಆ ದಿನ ಲಾರಿ ಚಾಲಕನು ಆಗಿದ್ದನು ಎಂದರೆ ಆ ದಿನ ನಾನು ನೋಡಿಲ್ಲ ಎಂದು ಉತ್ತರಿಸುತ್ತಾರೆ. ಆ ದಿನ ಲಾರಿ ಚಾಲಕನನ್ನು ನೋಡಿದ್ದರೂ ಸಹ ನೋಡಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ.ಎನ್.ಕೆ. ವಕೀಲರಿಂದ</u>**

ಚಿತ್ರದುರ್ಗದಲ್ಲಿ ಊಟ ಮಾಡಿ ಆ ದಿನ ಬಿಟ್ಟಿದ್ದೆವು. ಆ ದಿನ ಊಟ ಮಾಡಿದಾಗ ರಾತ್ರಿ 9 ಗಂಟೆ ಆಗಿತ್ತು. ನಿಮ್ಮ ವಾಹನದ ಚಾಲಕನು ಎಲ್ಲಿಯಾದರೂ ವಾಹನವನ್ನು ನಿಲ್ಲಿಸಿ ಊಟ ಏನಾದರೂ ಮಾಡಿದ್ದಾನಾ ಎಂದರೆ ಮಾಡಿಲ್ಲ ಚಹಾ ಕುಡಿಯಲು ಒಂದು ಬಾರಿ ನಿಲ್ಲಿಸಿದ್ದ ಎಂದು ಉತ್ತರಿಸುತ್ತಾರೆ. ಬಸವನಬಾಗೇವಾಡಿ ಹತ್ತಿರ ವಾಹನ ನಿಲ್ಲಿಸಿ ಚಹಾ ಕುಡಿದಿರುವ ವಿಷಯ ಪೊಲೀಸರ ಮುಂದೆ ಹೇಳಿಲ್ಲ. ವಾಹನವನ್ನು ನಿಲ್ಲಿಸಿ ಪೆಟ್ರೋಲ್ ಹಾಕಿಸಿಕೊಂಡ ಬಗ್ಗೆ ಪೊಲೀಸರ ಮುಂದೆ ಹೇಳಿದ್ದೀರಾ ಎಂದರೆ ಇಲ್ಲ

ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಬೆಳಗಿನ ಜಾವ ನಿದ್ದೆ ಬರುತ್ತದೆ ಎಂದರೆ ಸರಿ. ಆ ದಿನ ನಿಮ್ಮ ವಾಹನದ ಚಾಲಕನು ಸ್ಪೀಡಾಗಿ ಹೋಗಿರುತ್ತಾನೆ ಎಂದರೆ ಗೊತ್ತಿಲ್ಲ. ಲಾರಿಯ ಚಾಲಕನು ಲಾರಿಯನ್ನು ಸೈಡ್ ಕೊಟ್ಟಿದ್ದಾನೆ ಎಂದರೆ ಸಾಕ್ಷಿ ಲಾರಿ ಚಾಲಕ ಸೈಡ್ ಕೊಟ್ಟಿದ್ದಾನೆ ಒಮ್ಮೆಲೇ ಬ್ರೇಕ್ ಹಾಕಿದ್ದಾನೆ ಎಂದು ಉತ್ತರಿಸುತ್ತಾರೆ. ನೀವು ಹೋಗುತ್ತಿದ್ದಂತಹ ವಾಹನ ಎಷ್ಟು ಸ್ಪೀಡಾಗಿತ್ತು ಎಂದರೆ ಗೊತ್ತಿಲ್ಲ. ನೀವು ಪ್ರಯಾಣಿಸುತ್ತಿದ್ದಂತಹ ವಾಹನದ ಚಾಲಕನು ಸ್ಪೀಡಾಗಿ ಚಾಲನೆ ಮಾಡಿ ನಿದ್ದೆಗಣ್ಣಿನಲ್ಲಿ ಲಾರಿಗೆ ಅಪಘಾತಪಡಿಸಿದನು ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಲಾರಿಗೆ ಬ್ರೇಕ್ ಹಾಕಿದಾಗ ಸೌಂಡ್ ಕೇಳಿಸುತ್ತದೆ ಎಂದರೆ ಸರಿ. ಆ ದಿನ ಲಾರಿ ಚಾಲಕನು ಬ್ರೇಕ್ ಹಾಕಿದಾಗ ನಿಮಗೆ ಸೌಂಡ್ ಏನಾದರೂ ಕೇಳಿಸಿತ್ತಾ ಎಂದರೆ ಕೇಳಿಸಿಲ್ಲ ಎಂದು ಉತ್ತರಿಸುತ್ತಾರೆ. ಟಿಟಿ ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಲಾರಿ ಚಾಲಕನ ತಪ್ಪಿನಿಂದ ಅಪಘಾತ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪೊಲೀಸರು ನಿಮ್ಮ ಹೇಳಿಕೆಯಲ್ಲಿ ಏನೇನು ಬರೆದುಕೊಂಡಿದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಅಷ್ಟೇನು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಹೇಳಿಕೆಯಲ್ಲಿ ಏನೇನು ಬರೆದಿದ್ದಾರೆ ಎಂದು ಓದಿದ್ದೀರಾ ಎಂದರೆ ಓದಿಲ್ಲ ಎಂದು ಉತ್ತರಿಸುತ್ತಾರೆ. ಚಾಸಾ-1ರವರು ನಿಮ್ಮ ಪರಿಚಯದವರು ಆಗಿದ್ದರಿಂದ ಅವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಟಿಟಿ ವಾಹನದ ಚಾಲಕ ಮತ್ತು ಸಂಜುಕುಮಾರ ಮೃತಪಟ್ಟಿದ್ದರಿಂದ ಅವರಿಗೆ ಪರಿಹಾರ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂಡಾಧಿಕಾರಿಗಳು ಜೇವರಗಿ